IJFANS INTERNATIONAL JOURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012

# ಹೊನ್ನ ಕಣಜ ಕಥಾಸಾಹಿತ್ಯ : ವಸ್ತು, ತಂತ್ರ, ಭಾಷೆ ಮತ್ತು ಶೈಲಿ

ಡಾ.ನಾಗರೆಡ್ಡಪ್ಪ ಹೆಚ್

ಕನ್ನಡ ಉಪನ್ಯಾಸಕರು

## ಸರಾಂಶ

ಒಂದು ಸಮಾಜದಲ್ಲಿ ಅನೇಕ ಸಂಸ್ಕೃತಿಗಳಿವೆ. ಅವುಗಳು ತನ್ನದೇ ಆದ ಸಮಾಜಬದುಕು, ಜ್ಞಾನ, ಭಾಷೆ, ಜೀವನ ಸಮಗತಿ, ಘಟನೆಗಳು ಎಲ್ಲವನ್ನು ಹೊಂದಿರುತ್ತವೆ. ಅದೆಲ್ಲವನ್ನು ಬರಹಗಾರನು ತನ್ನದೇ ಆದ ಭಾಷೆಯಲ್ಲಿ ಕಥನ ರೂಪದಲ್ಲಿ ಕಟ್ಟಿಕೊಡುವನು. ಆದರೆ ಅನುಭವಗಳು ಎಲ್ಲರಿಗೂ ಎಲ್ಲ ಕಾಲಕ್ಕೂ ಇದ್ದೇ ಇರುತ್ತವೆ. ಆದರೆ ಅವುಗಳನ್ನು ಅಭಿವ್ಯಕ್ತಿಸುವುದಕ್ಕೆ ಸೂಕ್ತ ವಾತಾವರಣ ಒಮ್ಮೊಮ್ಮೆ ಇದ್ದಿರುವುದಿಲ್ಲ. ಅಂಥ ವಾತಾವರಣ, ಪರಿಸರ ದೊರೆತಾಗಲೇ ಅಂಥ ಅನುಭವ ಕಥನ ಮೂಡಿ ಬರುವುದಕ್ಕೆ ಸಾಧ್ಯವಾಗುತ್ತದೆ.

ಅದು ಈ ಮೂರು ದಶಕಗಳಿಂದ ನಮ್ಮ ಮನಸ್ಸನ್ನು ಸೆಳೆಯುತ್ತದೆ. ಇದು ಪವಮಾನಕ್ಕೆ ಬರಲು ಬಹುಮುಖ್ಯವಾದ ಪೇರಣೆ, ಪಭಾವಗಳು ಯಾವುವು ಎಂಬುದು ಕೂಡ ಚಿಂತನೆಗೊಳಪಡಿಸಿ ನೋಡಬೇಕಾಗುವುದು. ಈ ಕಾರಣಗಳಿಂದಾಗಿಯೇ ಪಸ್ತುತ ವಿಷಯವು ದಲಿತಬಂಡಾಯ ಸಣ್ಣ ಕಥೆಗಳ ಮೇಲೆ ಡಾ. ಅಂಬೇಡ್ಕರ್ ಮತ್ತು ಲೋಹಿಯಾ ಪ್ರಭಾವ ಹೇಗೆ? ಎಷ್ಟು? ಯಾವ ರೀತಿಯದ್ದಾಗಿದೆ? ಅದರ ಪರಿಣಾಮಗಳು ಏನು? ಎಂಬುದಾಗಿ ವಿಶ್ಲೇಷಿಸಿ ನೋಡಿ, ದಲಿತ ಮತ್ತು ಬಂಡಾಯ ಸಾಹಿತ್ಯವು ಬಹು ಮುಖ್ಯವಾಗಿ ಸ್ವಾತಂತ್ರೋತ್ತರ ಕಾಲ ಘಟ್ಟದಲ್ಲಿ ಹುಟ್ಟಿಕೊಂಡ ನಾಲ್ಕನೆಯ ಘಟ್ಟದ ಸಾಹಿತ್ಯವಾಗಿದೆ. ಆಧುನಿಕ ಕನ್ನಡದಲ್ಲಿ ೭೦ರ ದಶಕದಲ್ಲಿ ಇದು ಕಾಣಿಸಿಕೊಂಡಿತಾದರೂ ಈ ಸಾಹಿತ್ಯದ ಬೇರುಗಳು ಆಧುನಿಕ ಪೂರ್ವದ ಸಮಾಜ, ಸಾಹಿತ್ಯದಲ್ಲಿ ಇವೆ ಎಂತಲೇ ಹೇಳಬೇಕು. ಹಾಗೆ ನೋಡಿದರೆ ಮನುಷ್ಯ ತನ್ನ ಹುಟ್ಟಿನೊಂದಿಗೆ ಪ್ರಕೃತಿಯೊಂದಿಗೆ ನಿರಂತರವಾಗಿ ಮುಖಾಮುಖಿಯಾಗುತ್ತ ಪತಿರೋಧ ಒಡ್ಡುತ್ತಾ ಹೋರಾಟ ಮಾಡುತ್ತ ತನ್ನ ಅಸ್ತಿತ್ವವನ್ನು ಪಕಟಿಸುತ್ತ ಬಂದಿರುವನು. ಈ ಎಲ್ಲ ಹೋರಾಟ, ಪತಿರೋಧಗಳು ಆಗಾಗ ಅಲ್ಲಲ್ಲಿ ಸಣ್ಣ ಧನಿಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬಂದಿರುವುದನ್ನು ಕಾಣುತ್ತೇವೆ. ಆದರೆ ಇಡೀ ಪ್ರತಿರೋಧ, ಪ್ರತಿಭಟನೆಯನ್ನು

ISSN PRINT 2319 1775 Online 2320 7876
*Research paper* **© 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012**

ಮುಖ್ಯ ಸ್ಥಾಯಿ ಭಾವವಾಗಿಸಿಕೊಂಡು ನಿರ್ಮಾಣಗೊಂಡ ಸಾಹಿತ್ಯವೆಂದರೆ ಅದು ದಲಿತ ಮತ್ತು ಬಂಡಾಯ ಸಾಹಿತ್ಯವೆಂತಲೇ ಹೇಳಬೇಕು.

**ಪ್ರಮುಖ ಪದಗಳು** : ಹೊನ್ನ ಕಣಜ ಕಥಾಸಾಹಿತ್ಯ : ವಸ್ತು, ತಂತ್ರ, ಭಾಷೆ ಮತ್ತು ಶೈಲಿ

## ಪ್ರಸ್ತಾವನೆ

ಭಾರತೀಯ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಥೆಯ ಪಕಾರ ಹೊಸದಲ್ಲ. ಆದರೆ ಆಧುನಿಕ ಕಥೆಯ ಸ್ವರೂಪದಲ್ಲಿ ರಚನೆಯಾದ ನವೀನ ಸಾಹಿತ್ಯ ಪ್ರಕಾರ. ಅದು ಪಾಶ್ಚ್ಯಾತ್ಯರ ಪರಭಾವದಿಂದ ಕನ್ನಡದಲ್ಲಿ ಮೈದಾಳಿದೆ. ಆರಂಭದಲ್ಲಿ ಸಣ್ಣಕಥೆ ಎಂದರೇನು? ಎಂಬುವ ಚರ್ಚೆಯನ್ನು ನವೋದಯ ಪೂರ್ವ ತಲೆಮಾರಿನವರು ಮಾಡಿದರು. 'ಗಾತದ ದೃಷ್ಟಿಯಿಂದ ಚಿಕ್ಕದಾಗಿ', ಕುತೂಹಲ ಪಧಾನ ರಂಜಕ ಕಥನ ಎಂದು ಒಂದು ಸಾಮಾನ್ಯ ನಿರ್ಧಾರಕ್ಕೆ ಬರಲಾಯಿತು. ಹಾಗಾಗಿ ಆರಂಭದಲ್ಲಿ ಅವರು ಕಥೆಗಳ ಅಧ್ಯಯನದಲ್ಲಿ ಪಾತ್ರ ಪ್ರಧಾನ, ವಸ್ತು ಪ್ರಧಾನ, ಆವರಣ ಪ್ರಧಾನ, ಘಟನಾ ಪ ್ರಧಾನ ಎಂದು ಕಥೆಯು ಯಾವ ಯಾವ ವಿಷಯ ಪ್ರಮುಖವಾಗಿ ಪ್ರತಿನಿಧಿಸುತ್ತದೆ?, ಅದನ್ನು ಮುಖ್ಯವಾಗಿ ವಿಮರ್ಶಿಸಲಾಯಿತು. ಹಾಗೆ ನೋಡಿದರೆ ಪಾತ್ರ, ವಸ್ತು, ಆವರಣ, ಘಟನೆ ಎಲ್ಲ ಕಥೆಗಳು ಹೊಂದಿರುವ ಸಾಮಾನ್ಯ ಅಂಶಗಳೇ ಆಗಿವೆ. ಆದರೆ ಒಬ್ಬ ಕಥೆಗಾರ ಯಾವ ಕ್ರಮದಲ್ಲಿ ಅವುಗಳ ಸಂಯೋಜನೆ ಮಾಡಿರುತ್ತಾನೆ? ಅದರ ಮೇಲೆ ಕಥೆಯ ಉತ್ತಮತೆ ನಿರ್ಧರಿತವಾಗುತ್ತದೆ ಎಂದು ಕಥಾವಿಮರ್ಶಾ ಗ್ರಹಿಕೆಯು ಹುಟ್ಟಿಕೊಂಡಿತು. ಕಥೆಯು ಹೊಂದಿರುವ ಮುಖ್ಯ ಸಂಗತಿಗಳನ್ನು ಈ ಕೆಳಗಿನಂತೆ ನೋಡಬಹುದು.

## ಹೊನ್ನ ಕಣಜ ಕಥಾಸಾಹಿತ್ಯ : ವಸ್ತು

ಕಥೆ ಹೊಂದಿರುವ ವಸ್ತು. ಸಣ್ಣಕಥೆ ಒಳಗೊಳ್ಳಬೇಕಾದ ವಸ್ತುವು ಅದರ ರಚನೆಕಾರನ ಆಯ್ಕೆಗೆ ಸಂಬಂಧಿಸಿದುದು. ಸಣ್ಣಕಥೆಗೆ ಇಂತದೇ ವಸ್ತು ಇರಬೇಕೆಂದು ಯಾವ ಸಿದ್ಧಾಂತವು ನಿಖರವಾಗಿ ಹೇಳಲಾರದು. ಕಥೆಯೊಂದಕ್ಕೆ ಜೀವನದ ಯಾವ ಸಂಗತಿಯಾದರೂ ವಸ್ತುವಾಗಬಹುದು. ಕಥೆಗಾರ ಕಥೆಗಾಗಿ ಎತ್ತಿಕೊಳ್ಳುವ ವಸ್ತುವಿಗಿಂತ, ಎತ್ತಿಕೊಂಡ ವಸ್ತುವನ್ನು ಎಷ್ಟರಮಟ್ಟಿಗೆ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012

ಸಮರ್ಥವಾಗಿ ಕಟ್ಟಿಕೊಟ್ಟಿದ್ದಾನೆ ಎಂಬುದರತ್ತ ವಿಮರ್ಶೆಯ ಆಶಯ ಇರುತ್ತದೆ. ಜೀವನದ ಒಂದು ಸಣ್ಣ ಸಂಗತಿಯನ್ನೋ, ಘಟನೆಯನ್ನೋ ಕಥೆಯ ವಸ್ತುವಾಗಿಸಬಹುದು. ಸಣ್ಣ ಕಥೆಯೊಂದಕ್ಕೆ ವಸ್ತು ಘನವಾದದ್ದು, ಉದಾತ್ತವಾದದ್ದು, ಆದರ್ಶವಾದದ್ದು, ರಂಜಕವಾದದ್ದು ಇರಬೇಕೆಂಬ ನಿಯಮಗಳೇನಿಲ್ಲ. ಕಾದಂಬರಿಯು ಒಳಗೊಳ್ಳುವ ವಸ್ತುವಿಗಿಂತ ಸಣ್ಣಕಥೆ ಒಳಗೊಳ್ಳುವ ವಸ್ತು ಸ್ಫುಟವಾಗಿರುತ್ತದೆ. ಕಥೆಗಾರ ಎತ್ತಿಕೊಂಡ ವಸ್ತು ವರ್ತಮಾನದ್ದೋ, ಭೂತಕಾಲದ್ದೋ ಭವಿಷ್ಯದ್‌ಕಾಲದ್ದೋ ಯಾವುದೇ ಆದರೂ, ಕಥೆಯ ಆಶಯಕ್ಕೆ ಸರಿ ಹೊಂದುವಂತೆ ಸೂಕ್ತವಾಗಿ ಸಂಯೋಜನೆ ಮಾಡಿದ್ದಾನೆ ಎಂಬುದು ವಿಮರ್ಶಕನಿಗೆ ಮುಖ್ಯವಾಗುತ್ತದೆ. ಸಮರ್ಥನಾದ ಕಥೆಗಾರ ಸಾಮಾನ್ಯ ವಸ್ತುವೊಂದನ್ನು ಉದಾತ್ತ ಮಟ್ಟಕ್ಕೆ ಏರಿಸಿದಂತೆ, ಸಾಧಾರಣ ಕಥೆಗಾರನು ಅಸಾಮಾನ್ಯ ವಸ್ತುವನ್ನು ಕಥೆಯಾಗಿಸುವಲ್ಲಿ ಸೋಲಲುಬಹುದು. ಸಾಮಾನ್ಯವಾಗಿ ಕನ್ನಡದಲ್ಲಿ ರಚನೆಯಾದ ಕಥೆಗಳ ವಸ್ತುವಿನ ಹಿನ್ನೆಲೆಯಿಂದ ಮಾತು ಮುಂದುವರಿಸುವುದಾದರೆ, ಸಾಹಿತ್ಯ ಪಂಥದ ಅಥವಾ ಚಳುವಳಿಯ ತಾತ್ವಿಕ ಆಶಯವನ್ನು ಪ್ರತಿನಿಧಿಸುವ ವಸ್ತುವನ್ನೇ ಕಥೆಗಾಗಿ ಆರಿಸಿಕೊಂಡಿರುವುದು ಸಾಮಾನ್ಯವಾಗಿದ್ದರೂ, ಕೆಲವು ಕಥೆಗಾರರು ಅದನ್ನು ಮೀರಿ ಕಥಾನಕಗಳನ್ನು ರಚಿಸಿದ್ದಾರೆ. ಉದಾಹರಣೆಗೆ ನವೋದಯ ಸಾಹಿತ್ಯ ಆಶಯಕ್ಕೆ ಭಿನ್ನವಾಗುವ ಸಮಾಜವಾದಿ ವಸ್ತುಗಳನ್ನು ಮಾಸ್ತಿ, ಕುವೆಂಪುರವರು ಕಥೆಗಾಗಿ ಎತ್ತಿಕೊಳ್ಳುತ್ತಾರೆ. ಕಥೆಗಾಗಿ ಆಯ್ದುಕೊಳ್ಳುವ ವಸ್ತು ವಾಸ್ತವ ಅಥವಾ ಕಲ್ಪಿತವಾಗಿರುವದಕ್ಕಿಂತ, ವಾಸ್ತವಾಗಿರುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಅತೀ ಕಲ್ಪನೆಯಾಗಲಿ, ವಾಸ್ತವತೆಯಾಗಲಿ ಕಲಾತ್ಮಕವಾಗುವುದರಲ್ಲಿ ಹೆಣಗಾಡುವುದನ್ನು ಕಾಣುತ್ತೇವೆ. ಮೊಗಳ್ಳಿ ಗಣೇಶ್‌ರವರ 'ಬುಗುರಿ' ಹಾಗೂ 'ಒಂದು ಹಳೇ ಚಡ್ಡಿ'ಗಳಲ್ಲಿ ಮೊಗಳ್ಳಿಯವರು ಒಂದೇ ಕತೆಯನ್ನು ಹೇಳುತ್ತಿರುವಂತೆ ಭಾಸವಾಗುತ್ತದೆ. ಶೀನಿಯ ಚಡ್ಡಿ ಕಳೆದು ಹೋದುದೇ ಒಂದು ನೆಪವಾಗಿ ಇಲ್ಲಿ ಹದಗೆಟ್ಟ ಕೌಟುಂಬಿಕ ಸಂಬಂಧಗಳು ತೆರೆದುಕೊಳ್ಳುತ್ತವೆ. ನಾಗರಾಜನ ಕೌರ್ಯ, ಅಸೂಯೆಗಳು, ಅವನ ಮೂರನೆಯ ಹೆಂಡತಿ ಸಿದ್ದಿಯ ಗೋಳು, ಅವನ ಎಂಬತ್ತು ವರ್ಷ ವಯಸ್ಸಿನ ತಂದೆಯ ಹತಾಶೆ, ಇವೆಲ್ಲವುಗಳ ನಡುವೆ ಸಿಕ್ಕು ಅದೇ ಮದುವೆಯಾದ ಶಾಂತಿ ಅನುಭವಿಸುವ ಅವಮಾನ, ಕೊನೆಗೆ ಅಪಘಾತವೊಂದರಲ್ಲಿ ಶೀನಿಯ ಸಾವು ಇವೆಲ್ಲವೂ ಒಟ್ಟಾಗಿ ಕತೆಯಲ್ಲಿ ಯಾತನೆಯ ಒಂದು ಶಿಬಿರವನ್ನೇ ನಿರ್ಮಿಸಿಬಿಡುತ್ತವೆ. 'ನನ್ನಜ್ಜನಿಗೊಂದಾಸೆಯಿತ್ತು' ಕತೆಯ ನಿವೇದಕ ತನ್ನ ಕುಟುಂಬದವರನ್ನು ಕುರಿತು ಹೇಳುವ ಮಾತು "ಇಷ್ಟೆಲ್ಲವೂ ಆಗಿದ್ದರೂ,


IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012**

ವಿಷಾದವೆಂದರೆ ಮನೆಯ ಯಾರಿಗೂ, ಕೂಡ ನೀರಸ ಬದುಕಿನ ದುಃಖಾಂತಗಳಿಗೆ ಕಾರಣಗಳಾಗಲಿ ಹೊಸ ಹಾದಿಗಳಾಗಲಿ ಕೊಂಚವೂ ತಿಳಿದಿರಲಿಲ್ಲ"(ಮೊಗಳ್ಳಿ ಕಥೆಗಳು) 'ಬುಗುರಿ' ಮತ್ತು 'ಹಳೇ ಚಡ್ಡಿ'ಗಳ ಮನುಷ್ಯರ ಬಗೆಗೂ ಹೇಳಬಹುದಾಗಿದೆ. ಆದರೆ ಕತೆ ಮುಗಿಯುವ ವೇಳೆಗೆ ಈ ತಣಿಗೆ ಗೌಡನ ಮನೆ ಸೇರಿ ಅವನ ಮನೆಯ ಹಂಡೆಯ ಒಂದು ಭಾಗವಾಗಿ ಬಿಡುತ್ತದೆ. ತನ್ನ ಕೊನೆಯ ಆಸೆಯಾಗಿ ಈ ತಣಿಗೆಯನ್ನು ಅಜ್ಜ ಬೇಡಿದಾಗ ಅವನು ಹಾಸ್ಯದ ವಿಷಯವಾಗಿಬಿಡುತ್ತಾನೆ. "ಅವನ ಕೊನೆಯ ಆಸೆಯನ್ನು ಕೇಳಿಸಿಕೊಂಡ ಎಲ್ಲರೂ ಮನೆಯ ಹೆಂಚುಗಳು ಹಾರಿ ಹೋಗುವ ಹಾಗೆ ಭೀಕರವಾಗಿ ನಕ್ಕುಬಿಟ್ಟರು. ಕೆಲವರು ಇನ್ನೂ ನಗುತ್ತಲೇ ಇದ್ದರು. ಸಾಯುವವನ ಕೊನೆಯ ವಿಚಿತ ್ರ ಬಯಕೆಗೆ ನಮ್ಮ ಮನೆ ಅಷ್ಟೇ ವಿಚಿತ್ರವಾಗಿ ಪ್ರತಿಕ್ರಿಯಿಸಿತ್ತು."(ಮೊಗಳ್ಳಿ ಕಥೆಗಳು) ಅಜ್ಜನೊಡನೆ ಅವನು ಸಂಕೇತಿಸುವ ಸಮಷ್ಟಿ ಪಜ್ಞೆಯೂ ಅಳಿದು ಹೋಗುವುದು ಈ ಕತೆಯ ವಿಶಿಷ್ಟ ದರ್ಶನವಾಗಿದೆ.

## ಹೊನ್ನ ಕಣಜ: ಕಥಸಾಹಿತ್ಯ ತಂತ್ರ

ಕನ್ನಡ ಸಾಹಿತ್ಯ ಆರಂಭದ ಸಣ್ಣ ಕಥೆಗಳ ಬಗ್ಗೆ ನಡೆದ ಚರ್ಚೆಯು ಕಾಲದ ಚಾರಿತಿಕ ಒತ್ತಡ, ವಸಾಹತುಶಾಹಿಯ ಪಭಾವ, ಸಾಂಸ್ಕೃತಿಕವಾದ ಪಲ್ಲಟಗಳ ಹಿನ್ನೆಲೆಯಲ್ಲಿ ತೂಗಿನೋಡುª ದೃಷ್ಟಿಕೋನವಿದೆ. ವಸ್ತುವಿನ ಕಲಾತ್ಮಕತೆಯ ಅನಂತ ಸಾಧ್ಯತೆಗಳನ್ನು ಭಾವುಕತೆ, ಉದಾತ್ತತೆ, ಆದರ್ಶೀಕರಣ, ನೈತಿಕ ನೆಲೆಯ ಚರ್ಚೆಗಳು ಮುಖ್ಯವಾಗಿ ಪಂಜೆಮಂಗೇಶರಾಯ, ಕೆರೂರು ವಾಸುದೇವಚಾರ್, ಮಾಸ್ತಿ, ಆನಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ, ಕುವೆಂಪು ಕಥೆಗಳನ್ನು ಅವಲೋಕಿಸಲಾಗಿದೆ. ಭಾರತೀಯ ಸಾಂಪದಾಯಿಕ ಜೀವನ ಪದ್ಧತಿ, ವಸಾಹತುಶಾಹಿ ಸ್ಥಿತ್ಯಂತರಗಳ ಮುಖಾಮುಖಿಯಲ್ಲಿ ನವೋದಯ ಕಥನಗಳ ಜಾಡು ಅನಾವರಣಗೊಳ್ಳುತ್ತದೆ. ಮಾಸ್ತಿ ಅವರಿಂದ ಕಥೆಗಳ ಭೌತಿಕ ಸಂಗತಿಗಳನ್ನು ಮುಖ್ಯವಾಗಿಟ್ಟುಕೊಂಡು ಚರ್ಚೆ ನಡೆದವು. ಕಾಲಾಂತರದಲ್ಲಿ ಕೀರ್ತಿನಾಥ ಕುರ್ತಕೋಟಿ, ಜಿ.ಎಸ್. ಆಮೂರ, ಯು.ಆರ್ ಅನಂತಮೂರ್ತಿ, ಜಿ.ಎಚ್ ನಾಯಕ ಮುಖ್ಯವಾಗಿ ನವೋದಯ ಕಥೆಗಳ ಕುರಿತಾಗಿ ಮಾಡಿದ ವಿಮರ್ಶೆಗಳು ಪ್ರಮುಖವಾದವು.

ದಲಿತ-ಬಂಡಾಯ ಕಥೆಗಳ ವಿಮರ್ಶಾ ಪರಿಕರಗಳು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತುಳಿತಕ್ಕೆ ಒಳಗಾದವರ ಕಥನಗಳನ್ನು ಕಟ್ಟಿಕೊಡುವ ಸಾಧ್ಯತೆ ಮತ್ತು



IJFANS International Journal of Food And Nutritional Sciences Official Publication of International Association of Food and Nutrition Scientists

IJFANS INTERNATIONAL JOURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012

ಅವುಗಳ ಆಳ, ಅಗಲವನ್ನು ಕುರಿತಾದ ವಿಮರ್ಶೆಗಳು ರಚನೆಯಾದವು. ಈ ಹಂತದ ಕಥೆಗಳ ಭಾಷೆಯು ಮುಖ್ಯವಾಗಿ ಕೆಳವರ್ಗದ ಆಡುಮಾತನ್ನು ಅಳವಡಿಸಿಕೊಂಡಿತು. ದಲಿತ-ಬಂಡಾಯ ಕಥೆಗಳ ಕುರಿತಾಗಿ ಬಿ.ಎನ್ ಸುಮಿತ್ರಾಬಾಯಿ, ಎನ್.ಎಸ್ ಕೋದಂಡರಾಮ, ಎಲ್.ಹನಮಂತಯ್ಯ, ರಹಮತ್ ತರೀಕೆರೆ, ಆರೆ ಮಣಿಪಾಲ, ಚಂದ ್ರಶೇಖರ ಮುಂತಾದವರ ಬರಹಗಳು ಅನೇಕ ಕಥೆಗಳ ಒಳನೋಟವನ್ನು ಗುರುತಿಸುವ ಕೆಲಸ ಮಾಡಿವೆುರು. ಸಾಮಾಜಿಕ ಶೋಷಣೆಗೆ ಒಳಗಾದ ಕೆಳವರ್ಗದ ಸಮುದಾಯದ ಬದುಕಿನ ಚಿತಣವನ್ನು ಕಟ್ಟಿಕೊಡುವ ಮೂಲಕವಾಗಿ ಕನ್ನಡ ಕಥನವನ್ನು ಹೊರಳು ದಾರಿಯಲ್ಲಿ ಮುನ್ನಡೆಸಿದರು. ಈ ಅವಧಿಯಲ್ಲಿ ಸಾಹಿತ್ಯ ಕೃತಿಯೆಂದರೆ, ದಲಿತರ ಶೋಷಣೆ, ಹಸಿವು, ಅವಮಾನ, ಮಹಿಳಾ ಅತ್ಯಾಚಾರ, ಯಾಜಮಾನ್ಯ ಸಂಸ್ಕೃತಿಗಳು ಮಾಡುವ ಸಾಮಾಜಿಕ ಅಸಮಾನತೆಯ ಕೌರ್ಯ ಮುಂತಾದವನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಚಿತಿಸುತ್ತಾ ಬಂದಿದ್ದವು.

**ಹೊನ್ನ ಕಣಜ ಕಥಾಸಾಹಿತ್ಯ : ಭಾಷೆ**

ಒಂದು ಶ್ರೇಷ್ಠ ಕತೆ ಎನಿಸಿಕೊಳ್ಳಬೇಕಾದರೆ ಕತೆಗಾರನು ಬಳಸಿದ ಭಾಷೆ, ಶೈಲಿ ಮತ್ತು ವಸ್ತುಗಳನ್ನು ಅವಲಂಬಿಸಿರುತ್ತದೆ. ಉತ ್ತಮ ಕಥೆ ವಸ್ತುವಿದ್ದರೂ ಶೈಲಿ ಮತ್ತು ಭಾಷೆಯ ದೌರ್ಬಲ್ಯದಿಂದ ಕೃತಿಯ ಯಶಸ್ಸಿಗೆ ಧಕ್ಕೆ ಬರುತ್ತದೆ. ಆದರೆ ಕಳಪೆ ವಸ್ತುವಿದ್ದರೂ ಬಳಸಿದ ಶೈಲಿ ಮತ್ತು ಭಾಷೆಯ ಬಳಕೆಯಿಂದ ಕಾದಂಬರಿ ಯಶಸ್ವಿಯಾಗುತ್ತದೆ. ಆದ್ದರಿಂದ ವಸ್ತುವಿನ ಉದ್ದೇಶಕ್ಕನುಗುಣವಾಗಿ ಪರಿಣಾಮಕಾರಿಯಾದ ಭಾಷಾ ಶೈಲಿಯನ್ನು ಬಳಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಸಮುದಾಯದ ಲೇಖಕರು ತಮ್ಮದೆಯಾದ ತಳ ಸಮುದಾಯದ ಪ್ರಾದೇಶಿಕ ಭಾಷೆಯನ್ನು ಬಳಸಿಕೊಂಡು ಯಶಸ್ಸು ಕಂಡಿದ್ದಾರೆ.

ಮಾನವನ ಬದುಕಿನ ಯಾವುದೇ ಒಂದು ವಿಷಯದ ಬಗ್ಗೆ ತಿಳುವಳಿಕೆ ಆಗಬೇಕಾದರೆ ಪರಸ್ಪರ ಸಂವಹನದ ಮನವರಿಕೆ ಯಾಗಬೇಕಾಗುತ್ತದೆ. ನಂತರ ಆ ವಿಷಯವನ್ನು ಪರಸ್ಪರವಾಗಿ ತಿಳಿದುಕೊಳ್ಳುವಾಗ ಒಂದು ಸಾಧನವೂ ಅನಿವಾರ್ಯ ವಾಗುತ್ತದೆ. ಇದನ್ನು ತಿಳಿದುಕೊಳ್ಳಲು ಅಥವಾ ಅರ್ಥ ಮಾಡಿಕೊಳ್ಳಲು ಒಂದು ಭಾಷೆಯು ಮುಖ್ಯ ಉದ್ದೇಶವಾಗಿದೆ. ಜೊತೆಗೆ ಒಂದು ಜನಾಂಗದ ಸಂಸ್ಕೃತಿಯ ಸಂವಹನ ಕಾರ್ಯನಿರ್ವಹಿಸುವಲ್ಲಿ ಭಾಷೆ ಪ್ರಮುಖ ಪಾತವಹಿಸುತ್ತದೆ. ಭಾಷೆ ಎಂಬುದು ಮಾನವನ ಭಾವನೆಗಳ ಪೋಷಕ, ರಕ್ಷಕ ಹಾಗೂ ವಾಹಕವಾಗಿದೆ. ಅದು ಭಾವನೆಗಳನ್ನು ಅಭಿವ್ಯಕ್ತಿಸುವ ಮಾಧ್ಯಮ,



IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876
*Research paper* **© 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012**

ಭಾವನೆ ಅನುಭೂತಿಗಳನ್ನಷ್ಟು ಅಲ್ಲದೇ ಜ್ಞಾನ ಹಾಗೂ ವೈಚಾರಿಕತೆಯನ್ನು ಪ ್ರಕಟಿಸುವ ಮಾಧ್ಯಮವಾಗಿದೆ. ಭಾವವಿಲ್ಲದ ಭಾಷೆ ಭಾಷೆಯಿಲ್ಲದೆ ಭಾವನಿರರ್ಥಕವಾಗುತ್ತದೆ. ಸಮಾಜ ತೀವ್ರಗತಿಯಿಂದ ಮುಂದುವರೆಯುತ್ತ ಬಂದಿರುವ ಕಾರಣ ಭಾಷೆಯಲ್ಲಿ ಸಾಕಷ್ಟು ಬದಲಾವಣೆ ಕಂಡು ಬರುತ್ತದೆ. ಹೊಸ ಹೊಸ ಸನ್ನಿವೇಶಗಳಿಗೆ ಹೊಸ ಹೊಸ ಭಾವನೆಗಳಿಗೆ ಬದುಕಿನ ಮೌಲ್ಯಗಳಿಗೆ ತಕ್ಕಂತೆ ಭಾಷೆಯು ಪರಿವರ್ತನೆ ಗೊಳ್ಳಬೇಕಾಗುತ್ತದೆ. ಅಂದರೆ ಹೊಸ ರೀತಿಯ ಪಯೋಗಗಳು ಪದಪುಂಜಗಳು ಇವೆಲ್ಲಾ ಅತ್ಯಗತ್ಯ. ಸಾಹಿತಿ ಯಾದವರು ತಾವು ಬದುಕುವ ಸಮಾಜದೊಂದಿಗೆ ತನ್ನ ಭಾವನೆಗಳನ್ನು ತಿಳಿಯಪಡಿಸಲು ಅಥವಾ ಹಂಚಿಕೊಳ್ಳಲು ಭಾಷೆಯನ್ನು ಬಳಸಿಕೊಳ್ಳುತ್ತಾನೆ.

ಅಮರೇಶ ನುಗಡೋಣಿಯವರ ಸಾಹಿತ್ಯದಲ್ಲೂ ನಾವು ಪ್ರಾದೇಶಿಕ ಭಾಷೆಯನ್ನು ಗಮನಿಸಬಹುದು ಅವರ 'ಹೊತ್ತು ಮೂಡುವ ಸಮಯ' ಎಂಬ ಕಥೆಯಲ್ಲಿ ಒಬ್ಬ ಹೆಣ್ಣು ಮಗಳು ತನ್ನ ಬಂಜೆ ಎನ್ನುವರೆಂದು ಮಕ್ಕಳ ಆಸೆಗಾಗಿ ಗಂಡನಿಂದ ಆಗದ ಕಾರ್ಯಕ್ಕೆ ಬೇರೆಯವರಿಂದ ತನ್ನ ಬಯಕೆ ಭರಿಸಿಕೊಳ್ಳುವುದು ನಿರ್ಧಾರ ಮಾಡಿದಾಗ ಆಡುವ ಮಾತು "ನನ್ನಂಡಂತೂ ಷಂಡ ನನ್ನ ನನಮ್ಯಾಲೆ ಭರವಸೆ ಐತೆ, ನನ್ನ ಹೊಟ್ಯಾಗ ಒಂದು ಜೀವ ಬೆಳಿಬೇಕು, ಆ ಚಿನಾಲಿ ಸಿದ್ದಿಂಗಮ್ಮನ ಮಾತು ಸುಳ್ಳಾಗಬೇಕು, ಅದಕ್ಕೆ ಯಾರಾದೇನು? ಮಾದ್ದನೋ . ಹೊಲೆರವುನೋ ನನ್ನ ಸಂತಾನಬೇಕು.(ಹೊನ್ನ ಕಣಜ) .ಎಂದು ಹೇಳುವ ಆಕೆಯ ಪಾದೇಶಿಕ ಭಾಷೆಯಲ್ಲಿ ಕಥೆಯಲ್ಲಿನ ತಾಯಿತನವನ್ನು ಲೇಖಕರು ತುಂಬಾ ಚೆನ್ನಾಗಿ ಬಳಸಿದ್ದಾರೆ. ಪ್ರೊ. ಎಚ್.ಟಿ. ಪೊತೆಯವರ 'ಸಂಭ್ರಮ' ಕಥೆಯಲ್ಲಿ ದಲಿತನೊಬ್ಬನಿಗೆ ತನ್ನ ಮನೆಯಾಳಾಗಿದ ಹಾಗೂ ಆ ಮನೆತನದ ಮಾನ ಮರ್ಯಾದಿ ಉಳಿಸಲು ಗೌಡಶಾನಿ ಬೂದನನ್ನೆ ತನ್ನ ಆಸೆ ಆಕಾಂಕ್ಷೆಗಳಿಗೆ ಬಳಸಿಕೊಂಡಾಗ ಬೂದನ ತಾಯಿ ಮಗನಿಗೆ ಹೇಳುವ ಮಾತಿದು ಅಪ್ಪಾ ನೀಹಿಂಗ ಮಾಡಿದ್ದು ಗೌಡರಿಗೆ ಗೊತ್ತಾದ್ರ ನಾವು ಉಳಿತೇವೇನಪ್ಪಾ ಉಂಡ ಮನಿ ಜಂತಿ ಎಣಸದಂಗಾಗದಪ್ಪಾ ಎಂದು ಹೇಳುವ ಮಾತಿನ ಭಾಷೆಯಲ್ಲಿ ಲೇಖಕರು ಸಾಕಿದವರು ಮನೆಗೆ ದ್ರೋಹ ಬಗೆಯ ಬಾರದೆಂಬುವುದು ಇಲ್ಲಿನ ಭಾಷೆಯ ಒಳ ಅರ್ಥವಾಗಿದೆ.

## ಹೊನ್ನ ಕಣಜ ಕಥಾಸಾಹಿತ್ಯ : ಶೈಲಿ

ಕಥೆ ಕಾದಂಬರಿಗೆ ವಸ್ತು ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯತೆ ಆ ಕಥೆಯಲ್ಲಿನ ಭಾಷೆ ಮತ್ತು ಶೈಲಿ. ಶೈಲಿ ಎಂದರೆ ಉತ್ತಮ ಬರವಣಿಗೆ ಉತ್ತಮವಾಗಿ ಸಾಹಿತ್ಯ ಭಾಷೆಗೆ ಹೊದಿಸಿದ ಅಲಂಕಾರ, ಒಂದು ಸಾಹಿತ್ಯ

IJFANS INTERNATIONAL JOURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

*Research paper* **© 2012 IJFANS. All Rights Reserved,** **UGC CARE Listed (Group -I) Journal Volume 1, Issu 1, 2012**

ಸಂಪ್ರದಾಯದಲ್ಲಿ ಅಥವಾ ಲೇಖಕನಲ್ಲಿ ಗುರುತಿಸಬಹುದಾದ ಪತ್ಯೇಕತೆ ವಸ್ತು ವಿಷಯ ಸಂದರ್ಭಗಳಿಗೆ ಸಮಂಜಸ ಎನ್ನುವಂತೆ ಭಾಷೆಯನ್ನು ಬಳಸುವ ರೀತಿ, ಶೈಲಿ, ಭಾಷೆಯ ಮೂಲಕ ಅರಿವಿಗೆ ಬರುವ ಸಂಗತಿಯಾಗಿದೆ. ಸಂವಹ£ ಕ್ರಿಯೆಯಲ್ಲಿ ಮಾತ್ರವೇ ಶೈಲಿಯಿರುವುದು. ಶೈಲಿ ಮನುಷ್ಯ ನಿಗೆ ಅಭಿವ್ಯಕ್ತಿಯೂ ಹೌದು. ಜಗತ್ತಿನ ಪ್ರತಿಕ್ಷಣವೂ ತನ್ನ ಮೇಲೆ ಜರಿದು ಬೀಳುತ್ತಿರುವ ಅದೇಷ್ಟೋ ಆಘಾತಗಳಿಂದ ಸ್ವಂತಿಕೆಯನ್ನು ಕಾಪಾಡಿಕೊಳುವ ಮಾರ್ಗವೂ ಹೌದು. ಶೈಲಿ ಎಂದರೆ ಆಯ್ಕೆ ಶೈಲಿ ಪ ್ರಧಾನವಾಗಿ ವಸ್ತು ನಿಷ್ಠ, ನಿಜ, ಆದರೆ ಅದು ಸಮಮುಷ್ಟಿಯ ಮೇಲೆ ಪ್ರಭಾವ ಬೀರುವುದಲ್ಲದೆ ಅದರಿಂದ ಪ ್ರಭಾವಿತವಾಗುವುದು ಉಂಟು. ಆದ್ದರಿಂದ ಅದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವೂ ಹೌದು. ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವುದು ದರ್ಶನವೂ ಹೌದು ಎಂಬ ಮಾತು ಔಚಿತ್ಯ ಪೂರ್ಣವಾಗಿದೆ. ಸಾಹಿತಿಯ ಶೈಲಿಯು ಆತನ ವ್ಯಕ್ತಿತ್ವವನ್ನಷ್ಟೇ ಅಲ್ಲದೆ ಆತನ ಬದುಕಿನ ಸಮಾಜದ ಸಾಂಸ್ಕೃತಿಕ ಮಹತ್ವವನ್ನು ತಿಳಿಸಿಕೊಡುತ್ತದೆ.

ಒಂದು ವಸ್ತುವಿನ ಬಗೆಗೆ ಇಬ್ಬರು ಲೇಖಕರು ಬರೆಯತೊಡಗಿದಾಗ ಅವರು ಅಭಿವ್ಯಕ್ತ ಪಡಿಸುವ ರೀತಿ ಅದಕ್ಕೆ ತಕ್ಕಂತೆ ಬಳಸುವ ಭಾಷೆ, ಆ ಭಾಷೆಯ ಒಳಪದರುಗಳಾದ ಪಡೆ ನುಡಿ, ಗಾದೆ ಮಾತು, ಆಡು ಮಾತು, ವ್ಯಂಗ್ಯ ವಿಡಂಬನೆ ಇವೆಲ್ಲ ಮುಖ್ಯವಾಗುತ್ತವೆ. ಇವುಗಳ ಮೂಲಕವೇ ಲೇಖಕ ತನ್ನ ಅನುವಗಳನ್ನು ಕಟ್ಟಿಕೊಡುವಾಗ ಒಬ್ಬ ಲೇಖಕ ಮತ್ತೊಬ್ಬ ಲೇಖಕರಿಗಿಂತ ಹೆಚ್ಚು ಆಕರ್ಷಕರಾಗಿ ಪರಿಣಾಮಕಾರಿಯಾಗಿ ಕಾಣುತ್ತಾನೆ. ಆದ್ದರಿಂದ ಬರವಣಿಗೆಯ ಮಾಧ್ಯಮದಲ್ಲಿ ವಸ್ತು ಅನುಭವ ಧೋರಣೆಗಳಷ್ಟೇ ಆ ಲೇಖಕನದ ಭಾಷೆ, ಶೈಲಿ, ತಂತ್ರಗಳಿಗೂ ಮಹತ್ವದ ಸ್ಥಾನವಿದೆ.

ದಲಿತ-ಬಂಡಾಯ ಸಾಹಿತಿಗಳು ಸಾಹಿತ್ಯ ವಲಯದಲ್ಲಿ ತಮ್ಮದೆಯಾದ ರೀತಿಯಲ್ಲಿ ಗುರುತಿಸಿಕೊಳ್ಳಲು ಮುಖ್ಯ ಕಾರಣ ಅವರ ಬರವಣಿಗೆಯ ಶೈಲಿ ಮುಖ್ಯವಾಗಿ ನಾವು ಅಧ್ಯಯನದಲ್ಲಿ ಎರಡು ಭಾಗವಾಗಿ ವಿಂಗಡಿಸಿ ನೋಡಿದಾಗ ಮೊದಲಿಗೆ ಶೈಲಿಯ ಮೂಲಕ ಸಾಹಿತ್ಯ ವಲಯದಲ್ಲಿ ಎದ್ದು ಕಾಣುವ ಲೇಖಕ ಅಂದರೆ ದೇವನೂರು ಮಹಾದೇವನವರು ಅವರ ಬರವಣಗೆಯ ಶೈಲಿಯ ಮುಖೇನ ಅವರಿಗೆ ಗುರುತಿಸಲ್ಪಡುತ್ತಾರೆ. ಅಂತಹ ಶೈಲಿಯನ್ನು ರೂಪಿಸಿಕೊಂಡವರು ಬರಗೂರು ರಾಮಚಂದಪ್ಪ, ಹನ್ನೂರು ಚನ್ನಪ್ಪ, ಕರೀಗೌಡ ಬೀಚನಹಳ್ಳಿ, ಪ್ರೊ. ಕಾಳೇಗೌಡ ನಾಗವಾರ, ಮೊಗಳ್ಳಿ ಗಣೇಶ, ಬೆಸಗಳ್ಳಿ ರಾಮಣ್ಣ, ಡಾ.ಸಾ.ರಾ ಅಬೂಬಕರ್, ಬೋಳುವಾರು ಮಹಮ್ಮದ ಕುಂಞ ಹೀಗೆ ಹಲವಾರು

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012

ಲೇಖಕರು ದಕ್ಷಿಣ ಕನ್ನಡ ಗ್ರಾಮೀಣ ಭಾಷಾ ಶೈಲಿಯ ಮೂಲಕ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡು ಬಂದಿರುವ ದಲಿತ ಬಂಡಾಯ ಕಥೆ ಕಾದಂಬರಿಕಾರರು ಎಂದರೆ ತಪ್ಪಾಗಲಾರದು. ಉತ್ತರ ಕರ್ನಾಟಕದ ಲೇಖಕರು ಕೂಡ ತಮ್ಮ ಸೀಮೆಯ ಭಾಷೆಯನ್ನು ಇಟ್ಟು ಕೊಂಡು ವಿಶಿಷ್ಟ ರೀತಿಯ ಪದ ಬಳಕೆಯ ಮೂಲಕ ತಮ್ಮ ಬರವಣಿಗೆ ಶೈಲಿಯಲ್ಲಿ ಗುರುತಿಸಿಕೊಂಡು ಬಂದ ಲೇಖಕರು ಚೆನ್ನಣ್ಣ ವಾಲೀಕರ ಅಮರೇಶ ನುಗಡೋಣಿ, ಇಂದುಮತಿ ಲಮಾಣಿ, ಅನುಸೂಯಾ ಕಾಂಬಳೆ ಹೀಗೆ ದಲಿತ ಲೇಖಕರು ಅವರದ್ದೇ ಆದ ಬರವಣಿಗೆಯ ಶೈಲಿಯ ಮೂಲಕ ತಮ್ಮ ಸಮುದಾಯದ ಕಥೆಯನ್ನು ಕಟ್ಟಿಕೊಟ್ಟಿರುವುದು ಕಾಣಬಹುದು.

ಲೇಖಕರ ಭಾಷಾ ಶೈಲಿಯು ಅವರವರ ವ್ಯಕ್ತಿತ್ವಕ್ಕೆ ಹಾಗೂ ಜೀವನದೃಷ್ಟಿಗೆ ಅನುಗುಣವಾಗಿ ರೂಪುಗೊಳ್ಳುತ್ತದೆ. ಶೈಲಿ ಮತ್ತು ತಂತರವು ಲೇಖಕರ ಜೀವನ ದರ್ಶನದೊಂದಿಗೆ ಸಂಬಂಧವೂ ಹೊಂದಿರುತ್ತದೆ. ಸೃಜನಶೀಲ ಲೇಖಕ ತನ್ನ ಅನುಭವಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುವಾಗ ವ್ಯಕ್ತವಾಗುತ್ತದೆ. ಶೈಲಿಯು ಅಭಿವ್ಯಕ್ತಿಗೊಳಿಸುವ ತಂತದ ಜೊತೆಗೆ ಬರೆವಣಿಗೆಯ ಕಮವಾಗಿರುತ್ತದೆ. ಅಲ್ಲದೇ ಒಬ್ಬ ಲೇಖಕರಿಂದ ಇನ್ನೊಬ್ಬ ಲೇಖಕರಿಗೆ ಭೀನ್ನವಾಗಿರುತ್ತದೆ.

ಅಭಿವ್ಯಕ್ತಿ ಮಾಧ್ಯಮದ ಒಂದು ರೀತಿಯೆಂದು ಪರಿಗಣಿತವಾದ ಶೈಲಿಯು "ಸಾಹಿತಿಯ ವ್ಯಕ್ತಿತ್ವವನ್ನು ಬಿಂಬಿಸುವ ಸಾಧನವೂ ಹೌದು. ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವೂ ಹೌದು"(ಕ್ಯಾತನಹಳ್ಳಿ ರಾಮಣ್ಣ,) ಎಂಬ ಮಾತು ಶೈಲಿಯ ಕುರಿತು ಹೇಳಿರುವುದು ಸಮಂಜಸವಾಗಿದೆ. ಇಲ್ಲಿನ ಉತ್ತರ ಕರ್ನಾಟಕದ ಬಂಡಾಯ ಕಥೆಗಳಲ್ಲಿನ ಬಹುತೇಕ ಕಥೆಗಾರರು ಅತ್ಯಂತ ಸರಳವಾಗಿ, ಕಥಾ ರಚನೆಯಲ್ಲಿ ಸರಳ ಶೈಲಿ ಬಳಸುವ ಮೂಲಕ ಕತೆಗಳಿಗೆ ಜೀವ ತುಂಬುವಂತೆ ಮಾಡಿದ್ದಾರೆ. ಅಲ್ಲದೇ ತಾವು ಹುಟ್ಟಿದ ಪರಿಸರದ ಸುತ್ತಲಿನ ಭಾಷೆಯೇ ಇಲ್ಲಿ ಪರಮುಖವಾಗಿದೆ. ದೇವನೂರು ಮಹಾದೇವ ಅವರ ಹಳೆಯ ಮೈಸೂರು ಭಾಗದ ಚಾಮರಾಜ ನಗರದ ಗಾಮೀಣ ಪರಿಸರದ ಗ್ರಾಮ್ಯ ಭಾಷೆ, ಶೈಲಿ ಯಥೇಚ್ಚವಾಗಿ ಬಳಸಿದಂತೆ. ಶಾಂತರಸ, ಕುಂ.ವೀರಭಧ ◌ರಪ್ಪ, ರಾಜಶೇಖರ ನೀರಮಾನ್ವಿ, ಅಮರೇಶ ನುಗಡೋಣಿ, ಎಚ್.ಟಿ ಪೋತೆ, ಗುಡದೂರು ಕಲಿಗಣನಾಥ, ಚಿದಾನಂದ ಸಾಲಿಯಂತ ಕಥೆಗಾರರು ರಾಯಚೂರು, ಕಲಬುರಗಿ, ಬಳ್ಳಾರಿಯ ಭಾಷಾ ಶೈಲಿಯನ್ನು ವಿಸ್ತರಿಸಿ ಈ ಭಾಗದ ಕಥಾ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಚೌಗಲೆ, ಅಗಸನಕಟ್ಟೆ, ಅನಸೂಯ ಕಾಂಬಳೆ ಯವರು ಬೆಳಗಾವಿ ಭಾಗದ ಶೈಲಿಯಲ್ಲಿ ಕಥೆ ರಚಿಸಿದ್ದಾರೆ.

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012

ಒಟ್ಟಿನಲ್ಲಿ ಕಥೆಗಾರರಲ್ಲಿರುವ ಅಭಿವ್ಯಕ್ತಿಯ ಪ್ರತ್ಯೇಕತೆಯೇ ಶೈಲಿ, ಭಾಷಾ ರೀತಿಯೇ ಶೈಲಿಯಾಗಿದೆ. ಇದು ಲೇಖಕರಿಂದ ಭಿನ್ನವಾಗಿರುತ್ತದೆ. ದೇ.ಜವರೇಗೌಡರ ಅಭಿಪ್ರಾಯದಂತೆ "ಶೈಲಿ ಪ್ರಧಾನವಾಗಿ ವಸ್ತು ನಿಷ್ಠವಾಗಿದ್ದರಿಂದ ಸಮಷ್ಟಿಯ ಮೇಲೆ ಪ್ರಭಾವ ಬೀರುವುದಲ್ಲದೇ ಅದರಿಂದ ಪಭಾವಿತರಾಗುವುದು ಉಂಟು. ಆದ್ದರಿಂದ ಶೈಲಿ ಬರಹಗಾರನ ವ್ಯಕ್ತಿತ್ವ ವನ್ನು ಪತಿಬಿಂಬಿಸುವ ಸಾಧನವೂ ಹೌದು. ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವೂ ಹೌದು"( ಎಲ್.ಸಿ.ಸುಮಿತ್ರಾ,) ಈ ಹಿನ್ನೆಲೆಯಲ್ಲಿಯೆ ಬಂಡಾಯ ಕಥೆಗಳನ್ನು ಅವಲೋಕಿಸಿದಾಗ ಒಂದು ಪ್ರದೇಶದ ಸಾಂಸ್ಕೃತಿಕ ಸಾಮಾಜಿಕ ದಾಖಲೆಯಾಗಿದೇ ಎಂಬುದು ವಿಧಿತವಾಗುತ್ತದೆ.

**ಉಪಸಂಹಾರ**

ಕಥಾ ಸಾಹಿತ್ಯದಲ್ಲಿ ಮೂಡಿ ಬಂದಿರುವ ಸಾಮಾಜಿಕ ವ್ಯವಸ್ಥೆಯನ್ನು ನಿರೂಪಿಸಿರುವ ಬಗೆಯನ್ನು ಪರಿಶೀಲಿಸಲಾಗುತ್ತದೆ. ಸ್ತ್ರೀ ಚಿತಣದ ಹೊಸ ಮಾದರಿಗಳು, ಇತ್ತೀಚಿನ ಘಟನೆಗಳನ್ನು ಕಥೆಗಳ ಮೂಲಕ ವಿಶ್ಲೇಷಿಸಲಾಗಿದೆ. ಹೊನ್ನಕಣಜ ಸಂಪುಟಗಳಲ್ಲಿ ಬರುವ ಕಥೆಗಳನ್ನು ಅವಲೋಕಿಸಿ ಅದರಲ್ಲಿ ದಲಿತ ದಮನಿತರ ಬದುಕಿನ ಚಿತ ್ರಣವನ್ನು ಸಾಹಿತ್ಯಾತ್ಮಕವಾಗಿ ಕಟ್ಟಿಕೊಡಲಾಗಿದೆ. ದಲಿತ ಸಂವೇದನೆಯ ನೆಲೆಗಳನ್ನು ಕಥೆಗಳ ಮೂಲಕ ನಿರೂಪಿಸಲಾಗಿದೆ. ಅಲ್ಲದೇ ಕಥೆಗಳಲ್ಲಿ ಬರುವ ಸ್ತ್ರೀ ಪಾತ್ರದ ಚಿತ್ರಣಗಳನ್ನು ಹಾಗೂ ಶೋಷಣೆಯ ನೆಲೆಗಳನ್ನು ಕಟ್ಟಕೊಡಲಾಗಿದೆ. ದಲಿತ ಬಂಡಾಯ ಸಾಹಿತ್ಯದಲ್ಲಿ ನೀರೂಪಿತವಾದ ಬಂಡಾಯದ ಕಥೆಗಳನ್ನು ಮುಖ್ಯವಾಗಿ ಚರ್ಚಿಸಲಾಗಿದೆ. ಹಾಗೆಯೇ ಕಥೆಯಲ್ಲಿ ಬರುವ ಗಾಮ ಜೀವನ ಅವರ ಬದುಕಿನ ಚಿತಣಗಳನ್ನು ಎಳೆ ಎಳೆಯಾಗಿ ವಿವರಿಸಲಾಗಿದೆ. ಸಮಾಜಮುಖಿಯಾಗಿ ಬರುವ ಹತ್ತು ಹಲವು ಅಂಶಗಳನ್ನು ವಿಮರ್ಶಾತ್ಮಕವಾಗಿ ಹೇಳಲಾಗಿದೆ. ಹೆಣ್ಣು ಮತ್ತು ಗಂಡಿನ ಬೌದ್ಧಿಕ ಚಿಂತನೆಗಳು ಜಾಗತೀಕರಣದ ಸಂದ¨ದ ಸಣ್ಣಕಥೆಗಳು ಹೇಗೆ ನಿರೂಪಿಸಲಾಗುತ್ತದೆ. ಮತ್ತು ಮಾನವೀಯ, ವೈಚಾರಿಕ ನೆಲೆಗಳಲ್ಲಿ ಹೆಣ್ಣು-ಗಂಡಿನ ಸಂಬಂಧಗಳ ಸ್ವರೂಪ ಮತ್ತು ಸಬಲೀಕರಣದ ಭಾಗವಾಗಿ ಹೇಗೆ ಪತಿಪಾದಿಸಲಾಗಿದೆ ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಮೇಲ್ವಜಾತಿಯ ಮಹಿಳೆ ಮತ್ತು ಕೆಳಜಾತಿಯ ಮಹಿಳೆಯ ಬೌದ್ಧಿಕ ನಿರೂಪಣೆಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಸ್ತ್ರೀವಾದಿಯ ತಾತ್ವಿಕತೆಯ ಹಿನ್ನೆಲೆಯಲ್ಲಿ ಕಥಾ ಸಾಹಿತ್ಯದಲ್ಲಿ ಮಹಿಳಾ ಚಿಂತನೆಗಳನ್ನು ನಿರೂಪಿಸಲಾಗಿದೆ.

**ಪರಮಾರ್ಶನಗ್ರಂಥಗಳು**


IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed (Group -I) Journal Volume 1, Issu 1, 2012


1. ಮೊಗಳ್ಳಿ ಗಣೇಶ್, ಮೊಗಳ್ಳಿ ಕಥನಗಳು (ಸಮಗ್ರ), ಸಪ್ನ ಬುಕ್ ಹೌಸ್, ಬೆಂಗಳೂರು. ೨೦೦೮
2. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯
3. ಮೊಗಳ್ಳಿ ಗಣೇಶ್, ಜಾತಿ ಮೀಮಾಂಸೆ, ಅಭಿನವ ಪಕಾಶನ, ಬೆಂಗಳೂರು, ೨೦೧೫
4. ಕರೀಗೌಡ ಬೀಚನಹಳ್ಳಿ, ಆಯ್ದ ಕಥೆಗಳು, ಅಜಂತ ಪರಕಾಶನ, ಬೆಂಗಳೂರು, ೨೦೦೭
5. ಬರಗೂರು ರಾಮಚಂದ್ರಪ್ಪ (ಪ್ರ.ಸಂ.), ವಿವಿಧ ಲೇಖಕರು, ಕನ್ನಡ ಸಾಹಿತ್ಯ ಪತ್ರಿಕೆಗಳು ಇತಿಹಾಸ-ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩
6. ರಾಜಶೇಖರ ನೀರಮಾನ್ವಿ, ಸಮಗ ಕಥೆಗಳು, ಲೋಹಿಯಾ ಪಕಾಶನ, ಬಳ್ಳಾರಿ, ೨೦೧೨.
7. ಪ್ರೀತಂ, ಪ್ರಜಾವಾಣಿ : ಸಂಸ್ಕೃತಿ ಮತ್ತು ಸಾಹಿತ್ಯ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ,
8. ಕ್ಯಾತನಹಳ್ಳಿ ರಾಮಣ್ಣ, ಅನಿಕೇತನ, ಸಂ. ದೊಡ್ಡರಂಗೇಗೌಡ, ನಲ್ಲೂರು ಪಸಾದ್, ಜನವರಿ-ಮಾರ್ಚ್ ೨೦೦೦